ಯೂಟ್ಯೂಬ್ ಚಾನಲ್‌ನಲ್ಲಿ ಒಂದು ಸಲಹೆ ಕೊಟ್ಟರು. ಅನುಭವಿ ಬ್ಯಾಟ್ಸ್‌ಮನ್‌ಗಳು ಹೀಗೆ ದೀರ್ಘಾವಧಿ ಫಾರ್ಮ್ ಕಳೆದುಕೊಂಡರೆ, ಮತ್ತೆ ಹೋಗಿ ಪ್ರಥಮ ದರ್ಜೆ ಕ್ರಿಕೆಟ್‌ಪಂದ್ಯಗಳನ್ನು ಆಡಿ ಐಬುಗಳನ್ನು ನೀಗಿಕೊಂಡು ಬರಬೇಕು ಎನ್ನುವುದೇ ಆ ಸಲಹೆ. ಈಗ ದೇಸಿ ಕ್ರಿಕೆಟ್ ಋತು ಮುಗಿದಿದೆ. ರೋಹಿತ್ ಶರ್ಮ, ವಿರಾಟ್ ಕೊಹ್ಲಿ, ಶುಭಮನ್ ಗಿಲ್ ಇವರ್ಯಾರೂ ರಣಜಿ ಕ್ರಿಕೆಟ್ ಪಂದ್ಯವನ್ನು ಇನ್ನೊಂದಿಷ್ಟು ತಿಂಗಳ ಕಾಲವಂತೂ ಆಡಲು ಸಾಧ್ಯವಿಲ್ಲ.

ಇದು ವಸ್ತುಸ್ಥಿತಿ. ಈ ವಿಶ್ಲೇಷಣೆಯ ಇನ್ನೊಂದು ಮಗ್ಗಲನ್ನು ಗಮನಿಸೋಣ. ರಣಜಿ ಪಂದ್ಯಗಳಲ್ಲಿ ಚೆನ್ನಾಗಿ ಆಡುವ ಬ್ಯಾಟ್ಸ್‌ಮನ್ ಅಥವಾ ಬೌಲರ್‌ಗಳಲ್ಲಿ ಭಾರತ ಅಂತರರಾಷ್ಟ್ರೀಯ ಕ್ರಿಕೆಟ್ ತಂಡಕ್ಕೆ ಆಯ್ಕೆ ಆಗುತ್ತಿರುವವರಾದರೂ ಎಷ್ಟು ಮಂದಿ? 2024–25ರ ರಣಜಿ ಋತುವಿನಲ್ಲಿ ಅತಿ ಹೆಚ್ಚು ರನ್ ಗಳಿಸಿದ ಬ್ಯಾಟ್ಸ್‌ಮನ್ ಯಾರು, ಅತಿ ಹೆಚ್ಚು ವಿಕೆಟ್ ತೆಗೆದ ಬೌಲರ್ ಯಾರು ಎನ್ನುವುದನ್ನಾದರೂ ನಾವು ನೆನಪಿನಲ್ಲಿ ಇಟ್ಟುಕೊಳ್ಳುತ್ತೇವೆಯೇ?

2024–25ರ ರಣಜಿ ಋತುವಿನಲ್ಲಿ ಅತಿ ಹೆಚ್ಚು ರನ್ ಗಳಿಸಿದ ಬ್ಯಾಟ್ಸ್‌ಮನ್ ತನ್ಮಯ್ ಅಗರ್‌ವಾಲ್. ಇವರು ಐದು ರಣಜಿ ಪಂದ್ಯಗಳ ಒಂಬತ್ತು ಇನಿಂಗ್ಸ್‌ಗಳಲ್ಲಿ 615 ರನ್‌ಗಳನ್ನು 68.33ರ ಸರಾಸರಿಯಲ್ಲಿ ಗಳಿಸಿದರು. ಎರಡು ಶತಕಗಳು, ಅಷ್ಟೇ ಸಂಖ್ಯೆಯ ಅರ್ಧಶತಕಗಳು ಅದರಲ್ಲಿ ಸೇರಿವೆ.

ತನ್ಮಯ್ ಅವರ ಸಹಪಾಠಿ ತಿಲಕ್ ವರ್ಮ ಅದಾಗಲೇ ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಸದ್ದು ಮಾಡತೊಡಗಿದ್ದಾರೆ. ಅದನ್ನು ನೋಡಿಯೋ ಏನೋ, ಪ್ರಥಮ ದರ್ಜೆ ಕ್ರಿಕೆಟ್‌ಗೆ ಕಾಲಿಟ್ಟು ಒಂದು ದಶಕದ ನಂತರ ತನ್ಮಯ್ ಆಕ್ರಮಣಕಾರಿ ಆಟ ಆಡತೊಡಗಿದ್ದಾರೆ. ಮೊದಲು ಅವರಿಗೆ ತಾಳ್ಮೆಯ ಮೂಲಪಾಠವನ್ನು ವಿ.ವಿ.ಎಸ್. ಲಕ್ಷ್ಮಣ್ ಅವರಂತಹ ಹಿರಿಯರು ಕಲಿಸಿದ್ದರು. 2017 ಹಾಗೂ 2018ರಲ್ಲಿ ಸನ್‌ರೈಸರ್ಸ್ ಹೈದರಾಬಾದ್ ಐಪಿಎಲ್ ತಂಡಕ್ಕೆ ಆಯ್ಕೆಯಾದರೂ, ಒಂದೂ ಪಂದ್ಯದಲ್ಲಿ ಆಡುವ ಅವಕಾಶ ತನ್ಮಯ್ ಅವರಿಗೆ ಸಿಗಲಿಲ್ಲ. ಕೆಂಪು ಚೆಂಡಿನ ಕ್ರಿಕೆಟ್ ಬಯಸುವ ಸಂಯಮವನ್ನು ತಮ್ಮದಾಗಿಸಿಕೊಂಡಿರುವ ಅವರಿಗೆ, ಹೊಸ ಕಾಲದ 'ಹೊಡಿ–ಬಡಿ' ತಂತ್ರ ನೋಡಿ ಅದೇ ಸರಿಯೇನೋ ಎನ್ನುವ ಭಾವನೆ ಮೂಡಿದ್ದರೂ ಆಶ್ಚರ್ಯವಿಲ್ಲ. ಅದಕ್ಕೆ ಉದಾಹರಣೆಯಾಗಿ, 2024ರ ಜನವರಿಯಲ್ಲಿ ರಣಜಿ ಪ್ಲೇಟ್‌ಗ್ರೂಪ್ ಪಂದ್ಯದ ಒಂದು ಪಂದ್ಯದ ಅವರ ಆಟವನ್ನು ನಾವು ಮೆಲುಕು ಹಾಕಬೇಕು.

ಅರುಣಾಚಲ ಪ್ರದೇಶದ ವಿರುದ್ಧ ಹೈದರಾಬಾದ್‌ನಲ್ಲಿ ನಡೆದ ಪಂದ್ಯದಲ್ಲಿ ಅವರು 26 ಸಿಕ್ಸರ್‌ಗಳಿದ್ದ 366 ರನ್‌ಗಳನ್ನು ಮೊದಲ ಇನಿಂಗ್ಸ್‌ನಲ್ಲಿ ಗಳಿಸಿದರು. ಒಂದೇ ದಿನದ ಆಟದಲ್ಲಿ 160 ಎಸೆತಗಳಲ್ಲಿ 323 ರನ್‌ಗಳನ್ನು ಆ ರನ್‌ಗಳ ಪೈಕಿ ಅವರು ಕಲೆಹಾಕಿದ್ದರು. ಅದು




ಟೆಸ್ಟ್ ಕ್ರಿಕೆಟ್‌ನ ತೂಗುಯ್ಯಾಲೆಯಲ್ಲಿ ರೋಹಿತ್ ಶರ್ಮ

ವಿಶ್ವದ ಪ್ರಥಮ ದರ್ಜೆ ಕ್ರಿಕೆಟ್‌ನಲ್ಲೇ ಅತಿ ವೇಗದ ತ್ರಿಶತಕ. ವೀರೇಂದ್ರ ಸೆಹ್ವಾಗ್ ಒಂದೇ ದಿನ 284 ರನ್‌ಗಳನ್ನು ಪ್ರಥಮ ದರ್ಜೆ ಕ್ರಿಕೆಟ್‌ನಲ್ಲಿ ಹೊಡೆದಿದ್ದರು. ಆ ದಾಖಲೆಯನ್ನು ತನ್ಮಯ್ ಪುಡಿಗಟ್ಟಿದ್ದರು. 2017ರಲ್ಲಿ ದಕ್ಷಿಣ ಆಫ್ರಿಕಾದ ಮಾರ್ಕೊ ಮೊರಾಯಿಸ್ ಎಂಬ ಆಟಗಾರ 191 ಎಸೆತಗಳಲ್ಲಿ ತ್ರಿಶತಕ ಗಳಿಸಿ ಅತಿ ವೇಗದ ತ್ರಿಶತಕದ ದಾಖಲೆ ಬರೆದಿದ್ದರು. ತನ್ಮಯ್ ಇನಿಂಗ್ಸ್ ಅದನ್ನೂ ಅಳಿಸಿಹಾಕಿತ್ತು.

ಆಸ್ಟ್ರೇಲಿಯಾ ನೆಲದಲ್ಲಿ ಕೆಂಪು ಚೆಂಡಿನಲ್ಲಿ ಆಡುವಾಗ ಅನುಭವಿಗಳೂ ಹೇಗೆಲ್ಲ ತಡಕಾಡಿದರು ಎನ್ನುವ ಚಿತ್ರಣ ಕಣ್ಣಮುಂದೆ ಇದೆ. ಹೀಗಿರುವಾಗ, ತನ್ಮಯ್ ತರಹದ ಆಟಗಾರನ ಸಾಂಪ್ರದಾಯಿಕ ಶೈಲಿಯನ್ನು ದಾಳಿಕೋರ ಆಟವನ್ನಾಗಿ ಬದಲಿಸುತ್ತಿರುವ ವ್ಯವಸ್ಥೆಯ ವ್ಯಂಗ್ಯವೂ ಎದುರಲ್ಲಿದೆ.

ತನ್ಮಯ್ ನಂತರ ಈಚಿನ ರಣಜಿ ಕ್ರಿಕೆಟ್ ಋತುವಿನಲ್ಲಿ ಅತಿ ಹೆಚ್ಚು ರನ್ ಗಳಿಸಿದ ಇಬ್ಬರು – ಮಧ್ಯಪ್ರದೇಶದ ಶುಭಂ ಶ್ಯಾಮಸುಂದರ್ (100.83ರ ಸರಾಸರಿಯಲ್ಲಿ 605 ರನ್) ಹಾಗೂ ಬಿಹಾರದ ಆಯುಷ್ ಪಾಂಡೆ (80.57ರ ಸರಾಸರಿಯಲ್ಲಿ 564 ರನ್).

ಇದೇ ಋತುವಿನ ರಣಜಿ ಕ್ರಿಕೆಟ್‌ನಲ್ಲಿ ಅತಿ ಹೆಚ್ಚು



ತನ್ಮಯ್ ಅಗರ್‌ವಾಲ್

ವಿಕೆಟ್ ಪಡೆದ ಬೌಲರ್, ವಿದರ್ಭ ತಂಡದ ಹರ್ಷ್ ದುಬೆ. 37.27ರ ಸ್ಟ್ರೈಕ್‌ರೇಟ್‌ನಲ್ಲಿ 37 ವಿಕೆಟ್‌ಗಳನ್ನು ಉರುಳಿಸಿದ ಎಡಗೈ ನಿಧಾನಗತಿಯ ಬೌಲರ್ ಇವರು. ಜಮ್ಮು ಮತ್ತು ಕಾಶ್ಮೀರ ತಂಡದ ಬಲಗೈ ಮಧ್ಯಮ ವೇಗಿ ಆಕ್ವಿಬ್ ನಬಿ (24.84ರ ಸ್ಟ್ರೈರ್‌ರೇಟ್‌ನಲ್ಲಿ 32 ವಿಕಟ್) ಹಾಗೂ ಚಂಡೀಗಢದ ನಿಶುಂಕ್ ಬಿರ್ಲಾ (34.43ರ ಸ್ಟ್ರೈಕ್‌ರೇಟ್‌ನಲ್ಲಿ 32 ವಿಕೆಟ್) ಅತಿ ಹೆಚ್ಚು ವಿಕೆಟ್ ಗಳಿಸಿದವರ ಪಟ್ಟಿಯಲ್ಲಿ ನಂತರ ಸ್ಥಾನದಲ್ಲಿದ್ದಾರೆ. ಇವರೂ ಎಡಗೈ ನಿಧಾನಗತಿಯ ಸ್ಪಿನ್ನರ್. ಇನ್ನೂ 21ರ ಹರೆಯದ ಈ ಬೌಲರ್ ಕೂಡ ತಾನು ಆಲ್‌ರೌಂಡರ್ ಆದರಷ್ಟೇ ಉಳಿಗಾಲ ಎಂದು ನಂಬಿಕೊಂಡಿರುವವರು.

ಅಂತರರಾಷ್ಟ್ರೀಯ ಕ್ರಿಕೆಟ್ ಆಯ್ಕೆ ಮೇಲೆ ಐಪಿಎಲ್ ಪ್ರದರ್ಶನ ಇತ್ತೀಚಿನ ವರ್ಷಗಳಲ್ಲಿ ದೊಡ್ಡ ಮಟ್ಟದ ಪರಿಣಾಮ ಬೀರುತ್ತಿದೆ. ಹೀಗಿರುವಾಗ, ರಣಜಿ ಕ್ರಿಕೆಟ್ ತನ್ನ ಗತ ವೈಭವವನ್ನು ಉಳಿಸಿಕೊಂಡಿದೆಯೇ ಎನ್ನುವ ಇನ್ನೊಂದು ಪ್ರಶ್ನೆ ಎದುರಲ್ಲಿದೆ. ದಶಕಗಳ ಹಿಂದೆ ರಾಹುಲ್ ದ್ರಾವಿಡ್, ಅನಿಲ್ ಕುಂಬ್ಳೆ, ವಿ.ವಿ.ಎಸ್. ಲಕ್ಷ್ಮಣ್ ಅವರಂತಹವರೆಲ್ಲ ಆಗೀಗ ರಣಜಿ ಕ್ರಿಕೆಟ್ ಆಡಿ ಟೆಸ್ಟ್ ಕ್ರಿಕೆಟ್‌ಗೆ ಅಗತ್ಯವಿರುವ ಮನಸ್ಥಿತಿಯನ್ನು ಗಟ್ಟಿ ಮಾಡಿಕೊಳ್ಳುತ್ತಿದ್ದರು. ಅಜಿಂಕ್ಯ ರಹಾನೆ ಅವರು ಹೊಡೆಯುತ್ತಿದ್ದ ಪ್ರಥಮ ದರ್ಜೆ ಪಂದ್ಯಗಳ ದ್ವಿಶತಕಗಳು ಈಗಲೂ ಕಾಡುವಂತಿವೆ. ಚೇತೇಶ್ವರ ಪೂಜಾರ ತಾಳ್ಮೆಯ ಮೂರ್ತಿಯಾದದ್ದು ಆ ಮೂಲ ದೇಸಿ ಆಟದ ಕಾಲದಿಂದಲೇ. ಈಗ ಪರಿಸ್ಥಿತಿ ಬದಲಾಗಿದೆ.

ಬರೀ ಭಾರತದವರ ಪರಿಸ್ಥಿತಿ ಹೀಗೆ ಎಂದೇನೂ ಇಲ್ಲ. ಆಸ್ಟ್ರೇಲಿಯಾ ಟೆಸ್ಟ್ ಕ್ರಿಕೆಟ್ ತಂಡಕ್ಕೆ ಇತ್ತೀಚೆಗೆ ಪದಾರ್ಪಣೆ ಮಾಡಿದ ಸ್ಯಾಮ್ ಕಾನ್‌ಸ್ಟಸ್, ದಕ್ಷಿಣ ಆಸ್ಟ್ರೇಲಿಯಾ ತಂಡದ ವಿರುದ್ಧ ಕಳೆದ ವರ್ಷ ಅಕ್ಟೋಬರ್‌ನಲ್ಲಿ ಆಡಿದ ಪ್ರಥಮ ದರ್ಜೆ ಪಂದ್ಯದಲ್ಲಿ ತಮ್ಮ ಬದುಕಿನ ಮೊದಲ ಶತಕ ದಾಖಲಿಸಿದ್ದರು. 241 ಎಸೆತಗಳನ್ನು ತಾಳ್ಮೆಯಿಂದ ಎದುರಿಸಿ, 152 ರನ್‌ಗಳನ್ನು ಆಗ ಕಲೆಹಾಕಿದ್ದರು. ಆದರೆ, ಭಾರತದ ವಿರುದ್ಧ ಅವರು ಟೆಸ್ಟ್‌ನಲ್ಲಿ ಆಡುವ ಅವಕಾಶ ಸಿಕ್ಕಾಗ ದಾಳಿಕೋರ ಮನಸ್ಥಿತಿಯನ್ನು ತಮ್ಮದಾಗಿಸಿಕೊಂಡಿದ್ದರು; ಅದೂ ಆರಂಭಿಕ ಆಟಗಾರನಾಗಿ. ಜಸ್‌ಪ್ರೀತ್ ಬೂಮ್ರಾ ತರಹದ ಬೌಲರ ಅನ್ನು ಮಾತು, ನಡವಳಿಕೆ, ಆಂಗಿಕ ವರ್ತನೆಯಿಂದ ಕೆಣಕಿದರು. ಅವರ ಈ ಧೋರಣೆಯನ್ನು ಆಸ್ಟ್ರೇಲಿಯಾದ ಹಿರಿಯ ಕ್ರಿಕೆಟಿಗರೇ ಟೀಕಿಸಿದ್ದಾರೆ.

ಚುಟುಕು ಕ್ರಿಕೆಟ್ ಮೂಡಿಸುತ್ತಿರುವ ತಾತ್ಕಾಲಿಕ ಪ್ರಭಾವಳಿಯನ್ನು ನೆಚ್ಚಿಕೊಳ್ಳುವವರಿಗೆ ಟೆಸ್ಟ್ ಕ್ರಿಕೆಟ್ ಬಯಸುವ ಪರಮ ತಾಳ್ಮೆ ಎಲ್ಲಿಂದ ಬರಬೇಕು. ರಣಜಿ ಕ್ರಿಕೆಟ್‌ನಲ್ಲಿ ಎಷ್ಟು ಚೆನ್ನಾಗಿ ಆಡಿದರೂ ಪರಿಸ್ಥಿತಿ ಅಷ್ಟೆ ಎನ್ನುವ ಎಡಗೈ ಆಟಗಾರ ತನ್ಮಯ್ ಅಗರ್‌ವಾಲ್ ಅವರಂಥವರ ಮನಸ್ಸಂತೂ ಈಗ ಗುಂಡಿ ಬಿದ್ದಿರುವ ರಸ್ತೆಯಂತೆಯೇ ಹೌದು.

ಪ್ರತಿಕ್ರಿಯಿಸಿ: feedback@sudha.co.in